ಅ) ಪ್ರಸ್ತಾವನೆಗಳು ಕಾಲಕಾಲಕ್ಕೆ ಸ್ವೀಕೃತವಾಗಿವೆ. ೧೯೯೮-೯೯ರಲ್ಲಿ ಇಟಗಿಯಲ್ಲಿರುವ ಪಶು ಚಿಕಿತ್ಸಾಲಯವನ್ನು ಪಶು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ೨೦೦೦-೨೦೦೧ರಲ್ಲಿ ಸೋಗಿಯಲ್ಲಿರುವ ಒಂದು ಪ್ರಾಥಮಿಕ ಪಶು ಕೇಂದ್ರವನ್ನು ಪಶು ಚಿಕಿತ್ಸಾಲಯವನ್ನಾಗಿ ಮೇಲ್ದರ್ಜೆಗೇರಿಸಿದೆ.

ಹುಬ್ಬಳ್ಳಿ ನಗರದಲ್ಲಿ ಕ್ರೀಡಾಂಗಣ ನಿರ್ಮಾಣ.

೨೮೯೯(೨೫೫೯)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಾಣ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಇ) ಕ್ರೀಡಾಂಗಣ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಈ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಬಂದಿದೆ.

ಆ) ಸೂಕ್ತ ನಿವೇಶನ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ನಿವೇಶನ ಪಡೆದ ನಂತರ ಅಂದಾಜು ವೆಚ್ಚ ತಯಾರಿಸಲಾಗುವುದು.

ಈ) ಕ್ರಮ ತೆಗೆದುಕೊಳ್ಳುತ್ತಿರುವುದರಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಪಕ್ಷ ಸಂಸ್ಥೆಗಳಿಗೆ ಅನುದಾನ ಕುರಿತು.